ತುಂಬುವುದನ್ನು ಕಲಿತುಕೊಂಡಿದ್ದಳು. ಚಲನ್ ತುಂಬಿಸಿ, ಬ್ಯಾಂಕಿನ ಪತ್ರಗಳಿಗೆ ಹೆಬ್ಬೆಟ್ಟು ಹಾಕಿದಳು. ಅಯ್ನೋರಿಗೆ ಪೂರ್ತಿ ಹಣಕ್ಕೆ ಡಿಡಿ ಕೊಟ್ಟರು. ಮೂರು ದಿನಗಳ ಬಳಿಕ ಇನ್ಸ್‌ಪೆಕ್ಷನ್‌ಗಾಗಿ ಕೃಷ್ಣಪ್ಪ ಸಾವಿತ್ರಿಯ ಮನೆ ಕಡೆ ಹೋಗಬೇಕಾಯಿತು. ಚುರುಕಾಗಿದ್ದ ಕರು ನಿಂತಲ್ಲಿ ನಿಲ್ಲದೆ ನೆಗೆಯುತ್ತಿತ್ತು. ಸಾವಿತ್ರಿ ಖುಷಿಯಲ್ಲಿದ್ದಳು. ಕರುಗೆ ಬಿಟ್ಟು ಸಾಕಷ್ಟು ಹಾಲು ಕರೆಯುತ್ತೇನೆಂದು ಹೇಳಿದಳು. ಕೃಷ್ಣಪ್ಪ ಹೊರಗೆ ಮೇಯಿಸುವಾಗ ಜೊತೆಯಲ್ಲಿರುವಂತೆ, ಪ್ಲಾಸ್ಟಿಕ್ಕಿಗೆ ಬಾಯಿ ಹಾಕದಂತೆ ಜಾಗ್ರತೆ ವಹಿಸಲು ಸೂಚಿಸಿದರು. ಶೆಡ್ಡಲ್ಲಿ ಇರುವಾಗ ಮಗಳು ಬಂದಳು. ಯಾವತ್ತೂ ಸಮೀಪ ಬಂದವಳಲ್ಲ. ದೂರದಲ್ಲಿ ಓರೆಗಣ್ಣಲ್ಲಿ, ಅನುಮಾನದಿಂದ ನೋಡುತ್ತಾ ನಿಲ್ಲುತ್ತಿದ್ದಳು.

ಹತ್ತಿರ ಬಂದವಳನ್ನು ಕೃಷ್ಣಪ್ಪ ಗಮನಿಸಿದರು. ಮುಖದಲ್ಲಿ ನಗುವಿತ್ತು.

'ಯಾವ ಕ್ಲಾಸು?' ಕೃಷ್ಣಪ್ಪ ಕೇಳಿದರು.

'ಏಳನೇ ಕ್ಲಾಸು' ಸಾವಿತ್ರಿ ಉತ್ತರ ಕೊಟ್ಟಳು.

'ಇನ್ನು ಹೈಸ್ಕೂಲ್. ಚೆನ್ನಾಗಿ ಓದಬೇಕು' ಕೃಷ್ಣಪ್ಪ ಹೇಳಿದರು.

'ಚೆನ್ನಾಗಿ ಓದ್ತಾಳೆ ಸರ್. ಅವಳೇ ಫಸ್ಟ್. ಮೊನ್ನೆ ಬಹುಮಾನ ಬೇರೆ ಬಂದಿದೆ' ಸಾವಿತ್ರಿ ಅದನ್ನು ತೋರಿಸಲು ಮಗಳಿಗೆ ಹೇಳಿದಳು.

ಮಗಳು ಓಡಿ ಹೋಗಿ ಸರ್ಟಿಫಿಕೇಟ್ ತಂದಳು. ತಾಲೂಕುಮಟ್ಟದ ಭಾಷಣ ಸ್ಪರ್ಧೆಯಲ್ಲಿ ಮೊದಲ ಬಹುಮಾನ. ಕೃಷ್ಣಪ್ಪ ಬೆನ್ನು ತಟ್ಟಿ ಗುಡ್ ಎಂದರು. 'ಇದನ್ನು ಮುಂದುವರಿಸು. ಹಾಗೇ ಚೆನ್ನಾಗಿ ಓದ್ಬೇಕು' ಎಂದರು. 'ಹೌದ್ಸಾರ್, ಅದನ್ನೇ ಹೇಳ್ತಿದೇನೆ. ಒಳ್ಳೆ ಮಾರ್ಕು ತೆಗೆದ್ರೆ ಒಳ್ಳೇ ಸ್ಕೂಲಿಗೆ ಸೇರಿಸ್ತೇನೆ, ಕಷ್ಟ ಆದ್ರೂ ಪರ್ವಾಗಿಲ್ಲ' ಸಾವಿತ್ರಿ ಹೇಳಿದಳು. ಕೃಷ್ಣಪ್ಪ ಹೊರಡಲು ಅನುವಾದರು. ಮಗಳು ಅವರನ್ನೇ ನೋಡುತ್ತಿದ್ದಳು. 'ಬನ್ನಿ ಮನೆಗೆ' ಕರೆದಳು. ಕೃಷ್ಣಪ್ಪಗೆ ಆಶ್ಚರ್ಯವಾಯಿತು. ಅವರೆಂದೂ ಮನೆಯೊಳಗೆ ಹೋಗಿರಲಿಲ್ಲ. ಸಾವಿತ್ರಿಯೂ ಕರೆದಿರಲಿಲ್ಲ. 'ಸೆವೆಂತಲ್ಲಿ ಒಳ್ಳೇ ಮಾರ್ಕ್ಸ್ ತೆಗಿ. ನಾನೇ ಬಂದು ಸ್ವೀಟ್ ಕೊಡುತ್ತೇನೆ' ನಗುತ್ತಾ ಬೈಕ್ ಹತ್ತಿದರು.

**ಭಾಗ - 2**

ಬ್ಯಾಂಕಿನಲ್ಲಿ ಗುಸುಗುಸು ಶುರುವಾಗಿತ್ತು. ಶುರುವಾಗಿದ್ದು ರಾಜುವಿನಿಂದಲೇ! ಅವನಿಗೆ ಸಾವಿತ್ರಿಗೆ ಸಾಲ ಕೊಡುವುದು ಇಷ್ಟವಿರಲಿಲ್ಲ. ತಾನು ಊರವನು, ಇವರೆಲ್ಲ ಇವತ್ತು ಇದ್ದು ನಾಳೆ ಟ್ರಾನ್ಸ್‌ಫರ್ ಆಗಿ ಹೋಗುವವರು; ಊರ ವಿಚಾರಕ್ಕೆ ನನ್ನನ್ನು ವಿಚಾರಿಸಬೇಕು ಎಂದು ಬಯಸಿದ್ದ. ಮೊದಲ ಸಲ ಮ್ಯಾನೇಜರನ್ನು ಕರೆದುಕೊಂಡು ಹೋದಾಗ ಸಾವಿತ್ರಿ ರಾಜುವನ್ನು ಮಾತನಾಡಿಸಿರಲಿಲ್ಲ. ಅವನೂ ಲೇಸಿಯ ಹತ್ತಿರ ಇನ್ನೆಂತ ಮಾತು ಎಂದು ಅಸಡ್ಡೆ ಮಾಡಿದ್ದ. ಆನಂತರ ಆಕೆ ನೇರವಾಗಿ ಮ್ಯಾನೇಜರ್ ಚೇಂಬರಿಗೆ ಹೋಗುವುದನ್ನು ಅವನಿಂದ ಸಹಿಸಲಾಗುತ್ತಿರಲಿಲ್ಲ. ಮೊದಲ ಸಲ ಸಾಲ ಕೊಟ್ಟಾಗ ಹೇಗೋ ಸಹಿಸಿಕೊಂಡಿದ್ದ. ಹಸು ಸತ್ತು ಎರಡನೇ ಸಲ ಸಾಲ ಕೊಟ್ಟದ್ದು ಸರಿ ಕಂಡಿರಲಿಲ್ಲ. ಕೊಂಕು ಮಾತುಗಳನ್ನು ಆಡುತ್ತಿದ್ದ. ಕರೆದು ಸಾಲ ಕೊಟ್ಟವರಿಗೆ ಬೇರೇ ಉದ್ದೇಶ ಇಲ್ಲದೆ ಇರುತ್ತದೆಯೇ? ಎನ್ನುವ ಅವನ ಮಾತಿಗೆ ಗಾಳಿ ಹಾಕುವವರೂ ಇದ್ದರು.

ಮ್ಯಾನೇಜರ್ ಹೆಂಡತಿ ಮಕ್ಕಳನ್ನು ಬೆಂಗಳೂರಲ್ಲಿ ಬಿಟ್ಟು ಒಂಟಿಯಾಗಿ ಇರುವವರು; ಊಟಕ್ಕೆ, ತಿಂಡಿಗೆ ಹೆಚ್ಚಾಗಿ ಹೋಟೆಲ್, ಖಾನಾವಳಿಗಳಿಗೇ ಹೋಗುತ್ತಿರುತ್ತಾರೆ. ಎಲ್ಲವೂ ಪುಕ್ಕಟೆ ಸಿಗುವಾಗ ಬಿಡುತ್ತಾರೆಯೇ ಎಂದು ಕೆಲವರು ಅಸೂಯೆ ಪಡುತ್ತಿದ್ದರು. ನಾಯಿ ಹಸಿದಿದೆ, ಅನ್ನ ಹಳಸಿದೆ; ಭಾರೀ ಸಂಭಾವಿತ ಎಂದು ಪೋಸು ಕೊಡುವವರು ಮಾಡುವುದೆಲ್ಲಾ ಇಂತದ್ದೇ ಎಂದೆಲ್ಲಾ ಆಡಿಕೊಳ್ಳುತ್ತಿದ್ದರು. ಮ್ಯಾನೇಜರ್ ರಜೆಯಲ್ಲಿದ್ದುದರಿಂದ ಮಾತುಗಳಿಗೆ ರೆಕ್ಕೆ ಪುಕ್ಕ ಹುಟ್ಟಿಕೊಂಡಿತ್ತು. ಸಾವಿತ್ರಿ ಆಗಾಗ್ಗೆ ಬ್ಯಾಂಕಿಗೆ ಬರುತ್ತಿದ್ದಳು. ಹಣ ಕಟ್ಟುವುದು, ತೆಗೆಯುವುದು ಮಾಡುವುದಿತ್ತು. ಅಂದು ಮಗಳ ಜೊತೆ ಬಂದವಳು ತನ್ನ ಖಾತೆಯಿಂದ ಹಣ ಪಡೆದಳು. ಮೂರು ತಿಂಗಳ ಮಾಸಾಶನ ಜಮೆಯಾಗಿತ್ತು. ಕ್ಯಾಷಿಯರ್‌ನಿಂದ ಹಣ ಸ್ವೀಕರಿಸಿ ಮ್ಯಾನೇಜರ್ ಚೇಂಬರಿಗೆ ಹೋದಳು. ಚೇಂಬರ್ ಖಾಲಿ ಇತ್ತು.

'ಸಾರ್ ಇಲ್ವಾ?' ಕೌಂಟರಲ್ಲಿ ಕೇಳಿದಳು.

'ಇಲ್ಲ, ರಜೆಯಲ್ಲಿದ್ದಾರೆ' ಸಾವಿತ್ರಿ ಹೊರಡುವುದರಲ್ಲಿದ್ದಳು.

'ಏನು ಬೇಕಾಗಿತ್ತು?'